ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ. ಸಿ. ಸಂಖ್ಯೆ: 1952/23**

ಪಿಡಬ್ಲ್ಯು: – 1

<u>ದಿನಾಂಕ:26.09.2025ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಕೆ ಎ ಕೆ ಆರ್ ರವರಿಂದಃ-</u>

ನಾನು ಸೋಮವಾರಪೇಟೆಯಲ್ಲಿ ವಾಸವಾಗಿದ್ದೇನೆ. ನಾನು ಸೋಮವಾರಪೇಟೆಯಲ್ಲಿ ನನ್ನ ವ್ಯಾಪಾರ ಮಾಡುತ್ತೇನೆ. ಮಡಿಕೇರಿಯಲ್ಲಿ ನನ್ನ ಬಾಪ್ತು ಯಾವುದೇ ಅಂಗಡಿ ಇಲ್ಲ. ನಾನು ಪ್ರತ್ಯೇಕವಾಗಿ ಅಂಗಡಿ ಹಾಕಿಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ವ್ಯಾಪಾರ ಮಾಡಲು ನಾನು 2020 ರಲ್ಲಿ ಪಂಚಾಯತಿಯಿಂದ ಲೈಸನ್ಸ್ ಪಡೆದಿದ್ದೇನೆ ಮತ್ತು ನಾನು ನನ್ನ ವ್ಯವಹಾರದ ಬಾಪ್ತು ಇನ್‌ಕಂ ಟ್ಯಾಕ್ಸ್ ಕೂಡ ಪಾವತಿ ಮಾಡುತ್ತೇನೆ. ನಾನು ಜಿ ಎಸ್ ಟಿ ಕೂಡ ಪಾವತಿ ಮಾಡುತ್ತೇನೆ. ನಾನು ನನ್ನ ವ್ಯವಹಾರದ ಬಾಪ್ತು ಟಿನ್ ನಂಬರನ್ನು ಹೊಂದಿರುತ್ತೇನೆ. ಕೃಷಿ ಇಲಾಖೆಯಿಂದ ನಾನು ಕಾಫಿ ಮತ್ತು ಕರಿಮೆಣಸನ್ನು ವ್ಯಾಪಾರ ಮಾಡಲು ಲೈಸನ್ಸನ್ನು ಪಡೆದುಕೊಂಡಿರುತ್ತೇನೆ. ನಾನು ಸುಮಾರು 6 ವರ್ಷಗಳಿಂದ ಸದರಿ ವ್ಯಾಪಾರ ಮಾಡುತ್ತಿದ್ದೇನೆ. ನನ್ನ ವ್ಯಾಪಾರದಲ್ಲಿ ಪಾಟ್ನರ್ ಶಿಪ್ ಇರುವುದಿಲ್ಲ. ನಾನು ಸದರಿ ನನ್ನ ಕಾಫಿ ಮತ್ತು ಕರಿಮೆಣಸು ವ್ಯಾಪಾರ ಬಿಟ್ಟು ಬೇರೆ ವ್ಯವಹಾರ ಮಾಡುವುದಿಲ್ಲ. ನಾನು ನನ್ನ ವ್ಯಾಪಾರ ಶುರು ಮಾಡುವ ಮೊದಲು ಸೋಮವಾರಪೇಟೆಯಲ್ಲಿರುವ ಬ್ಯಾಗ್ ಕಾಫಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೆ. ಸದರಿ ಕಂಪನಿಯಲ್ಲಿ ನಾನು 23 ವರ್ಷ ಕೆಲಸ ಮಾಡಿದ್ದೇನೆ. 2020ನೇ ಇಸವಿಯಲ್ಲಿ ಕೊರೋನಾ ಮಹಾಮಾರಿ ಇದ್ದಾಗ ನಾನು ನನ್ನ ಮನೆಯಲ್ಲೇ ಇದ್ದೆ, ಯಾವುದೇ ಕೆಲಸ ಮಾಡುತ್ತಿರಲಿಲ್ಲ.

(ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.